ಕೆ.ಎಸ್. ರವಿಕುಮಾರ್

## ಹೆಜ್ಜೆ ಗುರುತಿತ್ತು ಹಿಮದ ಮೇಲೆ...

# ಸನ್ಯಾಸಿಯ ಪ್ರೇಮಕಾವ್ಯ

ನೀರವ ಇರುಳು.
ನಿರುಮ್ಮಳ ಬಾನು.
ನಿರ್ಮಲ ಬೆಳದಿಂಗಳು.
ಬೆಳದಿಂಗಳನ್ನು ಹೀರುತ್ತಿರುವ ಬಿಳಿಯ ಗಿರಿಶಿಖರಗಳು.
ಬಿಸಿ ಅಪ್ಪುಗೆಗೆ ಆಹ್ವಾನಿಸುತ್ತಿರುವ ತಂಗಾಳಿಯ ಮೃದು ಹುಯಿಲು.
ಏಕಾಂತದಲ್ಲಿವೆ, ಮೇಲುಪ್ಪರಿಗೆಯಲ್ಲಿ ಎರಡು ಜೀವಗಳು.

ಸಣ್ಣಗೆ ಉರಿಯುತ್ತಿರುವ ಪಣತಿಯನ್ನು ದಿಟ್ಟಿಸುತ್ತ, 'ಗೆಳತಿ, ತಥಾಗತನ ಮೇಲಾಣೆ, ಒಮ್ಮೆ ಮೊಗವೆತ್ತಿ ಕಣ್ಣು ಜೋಡಿಸು. ಈ ಸುಮಧುರ ಗಳಿಗೆ ಚಿರಂತನವಲ್ಲ, ತಡಮಾಡದಿರು. ತುಟಿಗಳ ಸಿಹಿಗೆ ನಾನು ಕಾದಿರುವೆನು...' ಎಂದ ಅವನು.

'ನನಗೆ ಅಂಜಿಕೆಯಾಗುತ್ತಿದೆ. ನೀವು ನೀವು...'

'ಹೇಳು... ಹೇಳು!... ಏನದು ನೀವು!?...'

'ನೀವು ಶಾಕ್ಯಮುನಿಯ ಅವತಾರ. ನಾನು ನಿಮ್ಮೊಡನೆ... ಹೀಗೆ!... ನೀವು ಬಯಸಿದ್ದನ್ನು ನೀಡಲು ಸಂಕೋಚವಾಗುತ್ತಿದೆ...'

'ನಿನ್ನ ಅಂಜಿಕೆ, ಸಂಕೋಚಗಳನ್ನೆಲ್ಲ ಹಿಮ ಜಾರಿಸಿದ ಬಂಡೆಯಂತೆ ಜಾರಿಸಿಬಿಡು. ಹೊರಗೊಮ್ಮೆ ನೋಡು, ಜಗತ್ತು ಬೆಳದಿಂಗಳೆಂಬ ಸ್ಫಟಿಕದಲ್ಲಿ ಮೀಯುತ್ತಿದೆ. ನಾವು ಪ್ರಣಯದ ಪರಿಶುದ್ಧ ಜಲದಲ್ಲಿ ಮೀಯೋಣ... ದಯೆಯಿಟ್ಟು, ಬಾ ಇನ್ನಷ್ಟು ಸನಿಹಕ್ಕೆ...' ಅವನ ದನಿಯಲ್ಲಿ ಯಾಚನೆಯಿತ್ತು.

'ಇಲ್ಲ ಗುರುವೇ... ನಾನು ತಪ್ಪು ಮಾಡುತ್ತಿರುವೆನೇನೋ ಎಂದು ಮನಸ್ಸು ವಿಹ್ವಲಗೊಂಡಿದೆ. ನನ್ನಿಂದ ನಿಮ್ಮ ಪಾವಿತ್ರ್ಯ ಹುಸಿಗೊಳ್ಳಬಾರದು. ನಾನು ತೆರಳುತ್ತೇನೆ. ನಿಮ್ಮ ಆಶೀರ್ವಾದವಿರಲಿ...' ತರುಣಿ ಏಳಲು ಹವಣಿಸಿದಳು.

'ಪಾವಿತ್ರ್ಯ!?... ಅದರ ಮನೆ ಹಾಳಾಯಿತು...'

'ಓಹ್!... ಹಾಗಲ್ಲ... ಗುರುವೆ...'

'ಮತ್ತೇನು, ನೀನೀಗ ಹೋಗುವೆಯಾದರೆ ನಾನು ಒತ್ತಾಯಿಸುವುದಿಲ್ಲ. ಆದರೆ ಕಾಮನೆಗಳ ಮಡುವಿನಲ್ಲಿ ನನ್ನನ್ನು ಕೆಡವಿ ಹೋಗಬೇಡ. ನಿನ್ನ ಯೌವ್ವನದ ಕಾವುಗಳಿಗೆ ಗುರಿ ಕಾಣಿಸದೆ ತಣ್ಣಗಾಗಲು ಬಿಡಬೇಡ. ಒಲೆ ಸುಮ್ಮನೆ ಉರಿಯುವುದಿಲ್ಲ... ಬಾ... ನನ್ನ ತೆಕ್ಕೆಗೆ ಜಾರು...' ಅವನು ಅವಳ ಕೈ ಹಿಡಿದು ನವಿರಾಗಿ ಎಳೆದ.